ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

ಸಿ.ಸಿ.**1375/2018**

ಸಿಡಬ್ಲೂಃ **5**

ಪಿ.ಡಬ್ಲೂಃ **7**

ಸಾಕ್ಷಿಯ ಹೆಸರು	:	ಅರ್ಜುನ ಮಹಾಬಳೇಶ್ವರ ಕದಮ
ವಯಸ್ಸು	:	**50** ವರ್ಷ
ಉದ್ಯೋಗ	:	ಒಕ್ಕಲುತನ
ವಾಸ್ತವ್ಯ	:	ಗೋಧೋಳಿ

ದಿನಾಂಕಃ **17-04-2025**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರ್ಕಾರಿ ವಕೀಲರಿಂದಃ-</u>

ಸಾಕ್ಷಿದಾರರಿಗೆ ಈಗ ನಿ ಪಿ 18 ನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. (ಸರ್ಕಾರಿ ವಕೀಲರು ಹೆಬ್ಬಟ್ಟಿನ ಗುರುತನ್ನು ಗುರುತಿಸಲು ಕೋರಿದ್ದು, ಸದರಿ ಹೆಬ್ಬಟ್ಟಿನ ಗುರುತನ್ನು ಗುರುತಿಸಲು ಬರದೇ ಇರುವ ಕಾರಣ ಸರ್ಕಾರಿ ವಕೀಲರ ಮನವಿಯನ್ನು ತಳ್ಳಿಹಾಕಲಾಯಿತು). ಸದರಿ ಹೆಬ್ಬಟ್ಟಿನ ಗುರುತನ್ನು ಪೋಲೀಸರ ಕೋರಿಕೆ ಮೇರೆಗೆ 5 ವರ್ಷಗಳ ಹಿಂದೆ ನಂದಗಡ ಪೋಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಸಾಕ್ಷಿದಾರರಿಗೆ ಈಗ ನಿ ಪಿ 5 ಹಾಗೂ 6 ನ್ನು ತೋರಿಸಲಾಗಿ ಅದರಲ್ಲಿ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ನಿ ಪಿ 5 ರಲ್ಲಿ ಬಲದಿಂದ ಎರಡನೆಯವನು ಹಾಗೂ ನಿ ಪಿ 6 ರಲ್ಲಿ ಎಡದಿಂದ ಎರಡನೆಯವನು ನಾನೇ ಎಂದು ನುಡಿಯುತ್ತಾರೆ. ಸದರಿ ನಿ ಪಿ 5 ಹಾಗೂ 6 ನ್ನು ಎಲ್ಲಿ ಮತ್ತು ಏಕೆ ತೆಗೆದಿದ್ದಾರೆಂದು ಗೊತ್ತಿಲ್ಲ. ನಿ ಪಿ 18 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ವಕೀಲರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು).

<u>ವಾಟೀ ಸವಾಲುಃ ಸರ್ಕಾರಿ ವಕೀಲರಿಂದಃ-</u>

ದಿಃ 29.03.2017 ರಂದು ಚಾಸಾ 17 ರವರು ನನ್ನನ್ನು ಹಾಗೂ ಚಾಸಾ 4 ರವರನ್ನು ಗೋಧೋಳಿ ಹದ್ದಿಯಲ್ಲಿರುವ ರಾಮನಗರ ಧಾರವಾಡ ರಸ್ತೆಯ ಮೇಲೆ ಕರೆಯಿಸಿದಂತೆ ಬಂದೆವು ಎಂದರೆ ಸರಿಯಲ್ಲ. ಆಗ ನಮಗೆ ಪೋಲೀಸರು ಪಂಚನಾಮೆಯ ವಿಷಯವನ್ನು ತಿಳಿಸಿದರು ಎಂದರೆ ಸರಿಯಲ್ಲ. ಚಾಸಾ 7 ರವರು ಅಪಘಾತ ಜಾಗೆಯನ್ನು ತೋರಿಸಿದರು ಎಂದರೆ ಸರಿಯಲ್ಲ. ಸದರಿ ಜಾಗೆಯಲ್ಲಿ ಸಿಲ್ವರ ಬಣ್ಣದ ಹುಂಡೈ ಐ-10 ಕಾರ ನಂಃ ಕೆಎ-26/ಎಂ-3138 ಇದ್ದು ಅದಕ್ಕೆ ಮುಂದಿನ ಹಾಗೂ ಮೇಲ್ಬಾಜು ಹಾಗೂ ಬಾಗಿಲುಗಳು ಪೂರ್ತಿ ಜಬ್ಬೆ ಆಗಿದ್ದವು ಎಂದರೆ ಸರಿಯಲ್ಲ ಮತ್ತು ಹಿಂದಿನ ಗ್ಲಾಸ ಹಾಗೂ ಲೈಟಗಳು ಒಡೆದು ಹೋಗಿದ್ದವು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಸಂಜೆ 5.30 ಗಂಟೆಯಿಂದ 6.30 ಗಂಟೆಯವರೆಗೆ ಮಾಡಲಾಯಿತು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ವಾಟೀ ಸವಾಲುಃ ಆರೋಪಿತರ ಪರ ಶ್ರೀ ಎ ಡಿ ಎಲ್ ವಕೀಲರಿಂದಃ-</u>

ಪಾಟೀಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸರಿ ಇದೆ.

ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಖಾನಾಪೂರ